ಮಾನ್ಯ ಸದಸ್ಯರು ಗೈರು ಹಾಜರಾಗಲು ಸದನದ ಸಹಮತಿ ಇದೆ ಎಂದು ಭಾವಿಸಲಾಗಿದೆ ಶ್ರೀ ಮೋಹನ ಕೆ ಶೆಟ್ಟಿ ಅವರು ಸದನಕ್ಕೆ ಗೈರುಹಾಜರಾಗಲು ಅನುಮತಿ ನೀಡಲಾಗಿದೆ

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಉಪಾಧ್ಯಕ್ಷರು – ಕಾಗದ ಪತ್ರಗಳನ್ನು ಮಂಡಿಸಲಾಯಿತು

4 ವರದಿಯನ್ನು ಒಪ್ಪಿಸುವುದು

ಶ್ರೀ ಎಂ ಪಿ ವೆಂಕಟೇಶ್. ಮಾನ್ಯ ಉಪಾಧ್ಯಕ್ಷರೆ, 2006–07ನೇ ಸಾಲಿನ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಮೂರನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ

ಉಪಾಧ್ಯಕ್ಷರು ಮಂಡಿಸಲಾಯಿತು

(ಕಾಂಗ್ರೆಸ್ ಪಕ್ಷದ ಸದಸ್ಯರು ಬಾವಿಯಿಂದ ಘೋಷಣೆಗಳನ್ನು ಕೂಗುತ್ತಿದ್ದರು)

5 ನಿಯಮ 169 ಮೇರೆಗೆ ನಿರ್ಣಯ ಮಂಡನೆ

ಉಪಾಧ್ಯಕ್ಷರು ಈಗ ನಿಯಮ 169ರ ಮೇರೆಗೆ ನಿರ್ಣಯ ಮಂಡನೆ

(ಶ್ರೀ ಎನ್ ಧರ್ಮಸಿಂಗ್ ಅವರು ಬಾವಿಯಿಂದ ಮಾತನಾಡುತ್ತಿದ್ದರು, ಕಾಂಗ್ರೆಸ್ ಪಕ್ಷದ ಇತರ ಸದಸ್ಯರು ಘೋಷಣೆಗಳನ್ನು ಕೂಗುತ್ತಿದ್ದರು)

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ವೆಲ್‌ನಿಂದ ಮಾತನಾಡುವ ಹಾಗೆ ಇಲ್ಲ

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್(ಗೃಹ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ವಿಧಾನ ಸಭಾಧ್ಯಕ್ಷರ ವಿರುದ್ಧವಾಗಿ ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಿದ್ದಾರೆ

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ ಸಾರ್ ವಿರೋಧ ಪಕ್ಷದ ನಾಯಕರಲ್ಲಿ ಸರ್ಕಾರದ ಪರವಾಗಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ ಇಲ್ಲಿಯವರೆಗೆ ಕೂಡ ನಮ್ಮ 50 ವರ್ಷದ ಕರ್ನಾಟಕ ವಿಧಾನ ಮಂಡಲದ ಇತಿಹಾಸದಲ್ಲಿ ಅವಿಶ್ವಾಸವನ್ನು ವ್ಯಕ್ತ ಮಾಡಿರತಕ್ಕಂಥ ಪ್ರಕರಣಗಳು ಇಲ್ಲವೇ ಇಲ್ಲ ಅದೇ ಕಾರಣಕ್ಕಾಗಿ ಈ ಸಂದರ್ಭದಲ್ಲಿ ನಾನು ವಿನಂತಿ ಮಾಡಿಕೊಳ್ಳತಕ್ಕದ್ದು ಇಷ್ಟೇ ತಾವು ದಯವಿಟ್ಟು ಅವಿಶ್ವಾಸ ಗೊತ್ತುವಳಿಯನ್ನು ಏನು ಮಂಡಿಸಿದ್ದೀರಿ? ಅದನ್ನು ತಾವು ಒತ್ತಾಯ ಮಾಡದೇ

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್. ನಾನು ಒತ್ತಾಯಿಸುತ್ತಿದ್ದೇನೆ ತಾವೆಲ್ಲರೂ ಹಿರಿಯರು ಇದ್ದೀರಿ ಬಹುತೇಕವಾಗಿ ಈ ಮನೆಯಲ್ಲಿ ತಮ್ಮಷ್ಟು ಅನುಭವ ಇರತಕ್ಕಂಥವರು ಮತ್ತೊಬ್ಬರು ಇಲ್ಲದೇ ಇರುವ ಕಾರಣಕ್ಕಾಗಿ ಹೇಳುತ್ತಿದ್ದೇನೆ ತಾವು ದಯವಿಟ್ಟು ಈ ಅವಿಶ್ವಾಸ ಗೊತ್ತುವಳಿಯನ್ನು ಒತ್ತಾಯ ಮಾಡಬಾರದು ಎಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ ಅದು ತಮ್ಮ ವಿವೇಚನೆಗೆ ಬಿಟ್ಟಿದ್ದು ದಯವಿಟ್ಟು ಈ ಗೊತ್ತುವಳಿಯನ್ನು ಒತ್ತಾಯ ಮಾಡಬಾರದು ಎಂದು ನಾನು ಪ್ರಾರ್ಥಿಸುತ್ತಿದ್ದೇನೆ

(ಗೊಂದಲ)

ಉಪಾಧ್ಯಕ್ಷರು ಈಗ ವಿರೋಧ ಪಕ್ಷದ ನಾಯಕರು ಇದಕ್ಕೆ ತಾವೇನು ಹೇಳುತ್ತೀರಿ?

(ಮಾನ್ಯ ಖರ್ಗೆಯವರು ಬಾವಿಯಿಂದ ಮಾತನಾಡುತ್ತಿದ್ದರು)

ಶ್ರೀ ಎಂ ಪಿ ಪ್ರಕಾಶ್: ಮಾನ್ಯ ಉಪಾಧ್ಯಕ್ಷರೆ, Sir, with due respect to you, ಒಮ್ಮತಕ್ಕೆ ಬಂದಾಗ ತಾವೆಲ್ಲರೂ ಒಪ್ಪಿಕೊಂಡಿದ್ದೀರಿ ತಾವು ಈ ಮೋಷನ್ ಬಂದಾಗ ಅದಕ್ಕೆ ಒತ್ತಾಯವನ್ನಾದರೂ ಮಾಡಿ ಅಥವಾ ವಾಪಸ್ ಆದರೂ ತೆಗೆದುಕೊಳ್ಳಿ

(ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಬಾವಿಯಿಂದ ಮಾತನಾಡುತ್ತಿದ್ದರು)

ಶ್ರೀ ಎಂ ಪಿ ಪ್ರಕಾಶ್ ನಾವು ವಿಚಾರವನ್ನು ತಿಳಿಸಿದಾಗ ತಾವು ಒಪ್ಪಂದ ಮಾಡಿಕೊಂಡು ಅದು ಒಪ್ಪಿ ವಾಪಸ್ಸು ಹೋಗತಕ್ಕದ್ದು, ತಮ್ಮಂತಹವರಿಗೆ ಭೂಷಣವಲ್ಲ ನಾವು ವಿನಂತಿ ಮಾಡಿಕೊಂಡಿದ್ದೇವೆ ಈ ವಿಚಾರವನ್ನು ಒಪ್ಪಿದ್ದೇವೆ ಎಂದು ಹೇಳಿದ್ದೇವೆ ಈ ಒಪ್ಪಂದದ ಪ್ರಕಾರ ನಾವು ಚರ್ಚೆ ಮಾಡುತ್ತೇವೆಂದು ಹೇಳಿದಿರಿ ಆಮೇಲೆ ನೀವು ಲಂಚ್‌ವರೆಗೆ

ಸದನವನ್ನು ಮುಂದಕ್ಕೆ ಹಾಕಿರಿ ಎಂಬ ವಿಚಾರವನ್ನು ಸಹ ಸಜೆಸ್ಟ್ ಮಾಡಿದಿರಿ ಇಷ್ಟೆಲ್ಲಾ ಮಾತನಾಡಿಕೊಂಡು ಬಂದು ವೆಲ್‌ನಲ್ಲಿ ಕುಳಿತುಕೊಂಡು ನಾನು ವಾಪಸ್ ಹೋಗುತ್ತೇನೆ ಎನ್ನುವುದಾದರೆ ನಾನು ಮಾನ್ಯ ಉಪಾಧ್ಯಕ್ಷರಿಗೆ ಒತ್ತಾಯ ಮಾಡುತ್ತೇನೆ ಬಿಸಿನೆಸ್ ನಡೆಯಬೇಕಾಗಿದೆ ತಾವು ದಯಮಾಡಿ ನಿಯಮ 169ರನ್ನು ಚರ್ಚೆಗೆ ತೆಗೆದುಕೊಳ್ಳಿ

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ ತಾವು ಈಗ ಮೋಷನ್ ಅನ್ನು ಕರೆಯಿರಿ If they are willing to press the motion, let them proceed

ಉಪಾಧ್ಯಕ್ಷರು ಈಗ ವಿರೋಧ ಪಕ್ಷದ ನಾಯಕರು ಇದಕ್ಕೆ ಸ್ಪಂದಿಸಬೇಕು

ಶ್ರೀ ಎಂ.ಪಿ.ಪ್ರಕಾಶ್ ಮಾನ್ಯ ವಿರೋಧ ಪಕ್ಷದ ನಾಯಕರು ಮೋಷನ್ ಕೊಟ್ಟಿದ್ದಾರೆ The prime mover of the motion has to move the resolution If it is not there, then it has to be rejected That means it need not come on the next day The prime mover of the motion is not interested in moving the resolution, you may reject it as he has not pressed ಆ ತರಹಮಾಡಿ

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಉಪಾಧ್ಯಕ್ಷರೆ The House is in order There are several rulings, even if there is an unruly atmosphere in the House, the House is in order The business has to go on We cannot allow some people to hold the House to a ransom ಅದನ್ನು ನಾವು ಮಾಡುವುದಕ್ಕೆ ಬಿಡುವುದಿಲ್ಲ

ಉಪಾಧ್ಯಕ್ಷರು ತಾವು ಮತ್ತೊಮ್ಮೆ ಮೂವ್ ಮಾಡುತ್ತೀರಾ? ವಿರೋಧ ಪಕ್ಷದ ನಾಯಕರು ದಯವಿಟ್ಟು ಮೂವ್ ಮಾಡಿ ತಾವು ಮೂವ್ ಮಾಡುತ್ತೀರಾ?

(ಶ್ರೀ ಎನ್ ಧರ್ಮಸಿಂಗ್ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರುಗಳು ಬಾವಿಯಿಂದ ಮಾತನಾಡುತ್ತಿದ್ದರು)

ಉಪಾಧ್ಯಕ್ಷರು ಈಗ subject reject ಆಗಬೇಕಾ?

ಶ್ರೀ ಆರಗ ಜ್ಞಾನೇಂದ್ರ ಮಾನ್ಯ ಉಪಾಧ್ಯಕ್ಷರೆ, ಮೇಲ್ಮನೆಯಲ್ಲಿ ನಡೆದ ಘಟನಾವಳಿಗಳ ಬಗ್ಗೆ ಕೆಳಮನೆಯ ಕಲಾಪಗಳನ್ನು ತಡೆ ಹಿಡಿದು ನಮ್ಮ

ಅಧಿಕಾರವನ್ನು ಸಹ ಮೊಟಕು ಮಾಡುತ್ತಿದ್ದಾರೆ ಕಳೆದ ಒಂದು ವಾರದಿಂದ ಸದನ ನಡೆಯುವುದಕ್ಕೆ ಬಿಡದೇ ರಾಜ್ಯದ ಜನಕ್ಕೆ ಅನ್ಯಾಯ ಮಾಡಿದ್ದಾರೆ ಸದನ ನಡೆಯುವವರೆಗೆ ದಯಮಾಡಿ ಅವರನ್ನು suspend ಮಾಡಬೇಕೆಂದು ಹೇಳಿ ನನ್ನ ವಿನಂತಿ ಇದೆ ಇದು ಸರಿ ಆಗುವುದಿಲ್ಲ

(ಗೊಂದಲ)

ಉಪಾಧ್ಯಕ್ಷರು ಧರಣಿ ಇದ್ದರೂ ಕೂಡ ಹೌಸ್ ಈಗ ಆರ್ಡರ್‌ನಲ್ಲಿ ಇದೆ ಈಗ ನೀವು ಮಂಡಿಸಿರುವ ನಿರ್ಣಯದ ಬಗ್ಗೆ ಏನು ತೀರ್ಮಾನ ಮಾಡುತ್ತೀರಿ?

(ಗೊಂದಲ)

ಉಪಾಧ್ಯಕ್ಷರು ಸಭೆ It is in order ಇದರ ಬಗ್ಗೆ press ಮಾಡುವುದಾದರೆ, ತಾವು ದಯವಿಟ್ಟು ತಮ್ಮ ಸೀಟುಗಳಿಗೆ ಹೋದರೆ

(ವಿರೋಧ ಪಕ್ಷದ ನಾಯಕರಾದ ಶ್ರೀ ಧರ್ಮಸಿಂಗ್‌ರವರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

MR DEPUTY SPEAKER House is in order ಈಗ ಈ ವಿಷಯದ ಬಗ್ಗೆ

ಶ್ರೀ ಆರಗ ಜ್ಞಾನೇಂದ್ರ ನಾವು ಈ ಹೌಸ್‌ನಲ್ಲೂ ಕೂಡ ಅವರನ್ನು ಹೊರಗೆ ಹಾಕಿ ಕಾರ್ಯಕಲಾಪ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು ಕಳೆದ ಒಂದು ವಾರದಿಂದ ಯಾವುದೇ ಕಲಾಪ ನಡೆಯಲಿಲ್ಲ ಜನರ ಸಮಸ್ಯೆಗಳು ಇಲ್ಲಿ ಚರ್ಚೆಯಾಗಬೇಕು ಆಯ್ಕೆ ಮಾಡಿ ಕಳುಹಿಸಿದ ಜನರಿಗೆ ನ್ಯಾಯ ದೊರಕಿಸಿಕೊಡಬೇಕು

(ವಿರೋಧ ಪಕ್ಷದ ನಾಯಕರು ಹಾಗೂ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಸದನದ ಬಾವಿಯಲ್ಲಿ ನಿಂತು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)

ಉಪಾಧ್ಯಕ್ಷರು ಸದನ ಈಗ orderನಲ್ಲಿದೆ ನಾನು ಮೂರು ಸಾರಿ ಕರೆದದ್ದಾಯಿತು ಪ್ರತ್ಯುತ್ತರ ಇಲ್ಲ ಅದಕ್ಕಾಗಿ ನಿರ್ಣಯಕ್ಕೆ ಅನುಮತಿ ಸಿಕ್ಕಿಲ್ಲ ಈಗ ಸದನವನ್ನು ಅರ್ಧ ಗಂಟೆ ಮುಂದೂಡಲಾಗಿದೆ

(ಅವಿಶ್ವಾಸ ನಿರ್ಣಯಕ್ಕೆ ಅನುಮತಿ ನಿರಾಕರಣೆ)

(ಸದನವನ್ನು ಮಧ್ಯಾಹ್ನ 12 ಗಂಟೆ 54 ಸೆಕೆಂಡಿಗೆ ಮುಂದೂಡಿ, ಪುನ ಅರ್ಧ ಗಂಟೆ ಬಳಿಕ ಸೇರಲು ತೀರ್ಮಾನಿಸಲಾಯಿತು)

(ಸದನವು ಪುನ 1 08ನಿಮಿಷಕ್ಕೆ ಪ್ರಾರಂಭವಾಯಿತು)

(ಉಪಾಧ್ಯಕ್ಷರು, ಅಧ್ಯಕ್ಷರು ಪೀಠದಲ್ಲಿದ್ದರು)

(ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಬಾವಿಗೆ ಬಂದು ಧರಣಿ ಮುಂದುವರೆಸಿದ್ದರು)

6 ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ

ಉಪಾಧ್ಯಕ್ಷರು ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಪ್ರಾರಂಭ ಮಾಡಿ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಅಂಕೋಲ) ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ರಾಜ್ಯಪಾಲರು ಜನವರಿ 25ನೇ ತಾರೀಖಿನಂದು ನಮ್ಮ ಈ ಸದನಕ್ಕೆ ಬಂದು ಉಭಯ ಸದನಗಳ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ್ದಾರೆ ಅವರಿಗೆ ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸುವುದು ಈ ಸದನದ ಜವಾಬ್ದಾರಿ ಮತ್ತು ಕರ್ತವ್ಯವೆಂದು ನಾನು ಭಾವಿಸಿದ್ದೇನೆ ರಾಜ್ಯಪಾಲರು ಮಾಡಿರುವಂತಹ ಭಾಷಣಕ್ಕೆ ನಾವೆಲ್ಲರೂ ವಂದನೆಗಳನ್ನು ಸಲ್ಲಿಸುತ್ತಾ, ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಹೇಳುತ್ತಾ, ಈ ಒಂದು ಸತ್‌ಸಂಪ್ರದಾಯ ಏನಿದೆ, ನಿಮಗೆ ಈ ಸದನದ ಬಗ್ಗೆಯೂ ಗೌರವ ಇಲ್ಲ, ರಾಜ್ಯಪಾಲರು ಮಾಡಿದ ಭಾಷಣದ ಬಗ್ಗೆಯೂ ಗೌರವ ಇಲ್ಲ ಸದನದ ಸಮಯವನ್ನು ಏಕೆ ಹಾಳು ಮಾಡುತ್ತಿದ್ದೀರಿ?

(ಸದನದ ಬಾವಿಯಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗುತ್ತಿದ್ದರು)

ಇಂಥ ಸಂಧರ್ಭದಲ್ಲಿ ನಮ್ಮ ಸರ್ಕಾರ ಮಾಡಿರುವ ಸಾಧನೆಗಳ ಬಗ್ಗೆಯೂ ಕೂಡ ಕಾಂಗ್ರೆಸ್‌ನವರಿಗೆ ಹೆಮ್ಮೆ ಇಲ್ಲ ಮಾನ್ಯ ರಾಜ್ಯಪಾಲರು ಅತ್ಯುತ್ತಮವಾದ ಒಂದು ಭಾಷಣವನ್ನು ಈ ಸದನದಲ್ಲಿ ಮಾಡಿದ್ದಾರೆ ಸರ್ಕಾರದ ನೀತಿ ನಿಯಮಗಳನ್ನು, ಧೋರಣೆಗಳನ್ನು ಕರ್ನಾಟಕದ ಜನತೆಯ ಮುಂದೆ ತಮ್ಮ ಮೂಲಕ ಇಟ್ಟಿದ್ದಾರೆ ಮಾನ್ಯ ಉಪಾಧ್ಯಕ್ಷರೆ, ಕಾಂಗ್ರೆಸ್‌ನವರು ಸದನವನ್ನು ನಡೆಸುವುದಕ್ಕೂ ಬಿಡುವುದಿಲ್ಲ ರಾಜ್ಯಪಾಲರ ಭಾಷಣಕ್ಕೂ ಇವರಿಗೆ ಗೌರವವಿಲ್ಲ, ಸ್ಪೀಕರ್ ಬಗ್ಗೆ ಇವರಿಗೆ ಗೌರವವಿಲ್ಲ ಕಾಂಗ್ರೆಸ್‌ನವರಿಗೆ ಇರುವಂಥ ಇತಿಹಾಸವನ್ನು ನೋಡಿದರೆ ಈ ರೀತಿ ಇವರು ಪ್ರಜಾಪ್ರಭುತ್ವಕ್ಕೆ ವಿರೋಧವಾಗಿ